

## ಹಳೆಯ ಕಾಲದ ಚಿಮಣಿ ದೀಪ

ಚಿಮಣಿ ದೀಪಗಳು ನಮ್ಮಿಂದ ದೂರವಾಗಿ ಹೆಚ್ಚು ವರ್ಷಗಳು ಕಳೆದಿಲ್ಲ. ಆದರೂ ಇವು ವಿಶೇಷವಾಗಿ ಕಾಣುತ್ತವೆ. ಕೆಲವರ ಮನೆಯಲ್ಲಿ ಇಂದಿಗೂ ಇವುಗಳನ್ನು ಬಳಸುವುದುಂಟು. ನಮ್ಮನ್ನಾಳುವ ಸರ್ಕಾರಗಳ ನಿರ್ಲಕ್ಷ್ಯತನದ ಪ್ರತಿಬಿಂಬದಂತೆಯೂ ಚಿಮಣಿ ದೀಪಗಳು ಬೆಳಕು ಚೆಲ್ಲುತ್ತವೆ.

ಇವೆಲ್ಲವೂ ನೆನಪಾಗಿದ್ದು, ಈಚೆಗೆ ಕೊಪ್ಪಳ ಜಿಲ್ಲೆಯ ಬಿಕನಳ್ಳಿ ಗ್ರಾಮದ ನಿಂಗಪ್ಪ ಗೊರವರ ಎಂಬುವವರ ಮನೆಯಲ್ಲಿ ಹಳೆಯ ಕಾಲದ ಈ ಚಿಮಣಿ ದೀಪವನ್ನು ಕಂಡಾಗ. ನಮ್ಮ ಪೂರ್ವಜರು ಅಳವಡಿಸಿಕೊಂಡಿದ್ದ ಬೆಳಕಿನ ವ್ಯವಸ್ಥೆಗೆ ಇದು ಸ್ಪಷ್ಟ ಸಾಕ್ಷಿಯಾಗಿತ್ತು. ಈಗೇನಿದ್ದರೂ ಕೃತಕ ಬೆಳಕಿನದ್ದೇ ಆರ್ಭಟ. ವಿದ್ಯುದ್ದೀಪಗಳೇ ಎಲ್ಲೆಡೆ ರಾರಾಜಿಸುತ್ತಿವೆ.

ಆದರೆ, ಕೆಲವು ವರ್ಷಗಳ ಹಿಂದೆ ಅಂದರೆ ವಿದ್ಯುತ್ ಎಲ್ಲೆಡೆ ಸಂಪರ್ಕ ಸಾಧಿಸುವುದಕ್ಕಿಂತ ಪೂರ್ವದಲ್ಲಿ ಕೃತಕ ಬೆಳಕಿಗಾಗಿ ನಮ್ಮ ಪೂರ್ವಜರು ಚಿಮಣಿ ದೀಪಗಳನ್ನೇ ಅವಲಂಬಿಸಬೇಕಿತ್ತು. ಸೀಮೆ ಎಣ್ಣೆಯ ಸಹಾಯದಿಂದ ಉರಿಯುತ್ತಿದ್ದ ಈ ಚಿಮಣಿ ದೀಪ ರಾತ್ರಿ ವೇಳೆ ಇಡೀ ಮನೆಗೆ ಬೆಳಕು ನೀಡುತ್ತಿದ್ದವು. ವಿದ್ಯುತ್ ಆವಿಷ್ಕಾರವಾದ ಬಳಿಕ ಹಂತ ಹಂತವಾಗಿ ಎಲ್ಲ ಕಡೆ ವಿದ್ಯುತ್ ದೀಪಗಳು ಬಂದು ಈ ಚಿಮಣಿ ದೀಪಗಳು ಕಾಲಕ್ರಮೇಣ ನಿರುಪಯುಕ್ತವಾದವು. ದಿನಗಳೆದಂತೆ ಕಣ್ಮರೆಯಾಗತೊಡಗಿದವು.

—ಸೋಮಲಿಂಗಪ್ಪ ಬೆಣ್ಣಿ, ಕೊಪ್ಪಳ



## ಬಹೂಪಯೋಗಿ ಗೂಟ

ಚಿತ್ರದಲ್ಲಿ ಕಾಣುತ್ತಿರುವುದು ಹಳೆಯ ಕಾಲದ ಮನೆಯೊಂದರ ಗೋಡೆಗೆ ಬಡಿದ ಗೂಟ. ಇದನ್ನು ಹ್ಯಾಂಗರ್ ಅನ್ನಲೂಬಹುದು. ಹ್ಯಾಂಗರ್‌ನಂತೆ ಕೇವಲ ಬಟ್ಟೆ ಮಾತ್ರವಲ್ಲದೆ ಚೀಲ, ದವಸ ಧಾನ್ಯಗಳ ಸಣ್ಣ ಮೂಟೆಗಳು, ಮಡಿ ಸೀರೆ, ಧೋತರ ಸೇರಿದಂತೆ ಇನ್ನೂ ಹಲವು ವಸ್ತುಗಳನ್ನು ಇದಕ್ಕೆ ನೇತು ಹಾಕಬಹುದು.

ಚಿತ್ರದಲ್ಲಿ ಕಾಣುತ್ತಿರುವ ಗೂಟವು ಕಂಡು ಬಂದಿದ್ದು ರಾಯಚೂರು ಜಿಲ್ಲೆಯ ಮಸರಕಲ್ಲ ಗ್ರಾಮದ ಸುಮಾರು 18ನೇ ಶತಮಾನದಲ್ಲಿ ದಾಸಶ್ರೇಷ್ಠರಾಗಿದ್ದ ಗೋಪಾಲದಾಸರ ಮನೆಯಲ್ಲಿ. ಇಂದಿಗೂ ಈ ಮನೆಯನ್ನೂ ಹಾಗೆಯೇ ಸುಸ್ಥಿತಿಯಲ್ಲಿ ಉಳಿಸಿಕೊಳ್ಳಲಾಗಿದೆ. ಮಡಿ ಸೀರೆ ಧೋತರಗಳನ್ನಂತೂ ಮಾಳಿಗೆ, ನದಿದಂಡೆ ಮೇಲೆ ಒಣಗಿಸಿ ನೆರಿಗೆ ಹಾಕಿ ಸುತ್ತಿ ಒಳಗಿನಿಂದ ಎಳೆದು ಒಂದೇ ಗಂಟು ಹಾಕಿ ಇದಕ್ಕೆ ನೇತು ಹಾಕುತ್ತಿದ್ದರು. ಹಿಂದಿನ ಕಾಲದಲ್ಲಿ ಮನೆಗಳ ಅಡುಗೆ ಮನೆ, ನಡುಮನೆ, ಪಡಸಾಲೆ, ಮಲಗುವ ಕೋಣೆ ಹೀಗೆ ಎಲ್ಲ ಕಡೆ ಇಂಥ ಗೂಟಗಳು ಇರುತ್ತಿದ್ದವು.

—ಸ್ಮಿತಾ ಮೈಸೂರ, ಹುಬ್ಬಳ್ಳಿ

## ಮೂಲೆ ಸೇರಿದ ಮಡಿಕೆ

ಹೀಗೆ ಒಂದರ ಮೇಲೊಂದು ಪೇರಿಸಿಟ್ಟ ಮಡಿಕೆಗಳು/ಗಡಿಗೆಗಳು ಕಂಡಿದ್ದು ಸ್ನೇಹಿತನ ಮನೆಯಲ್ಲಿ. ಕುತೂಹಲದಿಂದ ಮಡಿಕೆಗಳ ಒಳಗಡೆ ಏನೆಲ್ಲಾ ಹಾಕಿಟ್ಟರಬಹುದೆಂದು ಇಣುಕಿದೆ. ಅವುಗಳಲ್ಲಿ ಏನೂ ಇರಲಿಲ್ಲ.

ಬರೀ ನುಸಿ ಧೂಳು. ನೀರು ಸಂಗ್ರಹಿಸಲು, ಅಡುಗೆ ಮಾಡಲು, ಧಾನ್ಯ ಶೇಖರಣೆಗೆ ಒಂದು ಕಾಲದಲ್ಲಿ ಬಳಸುತ್ತಿದ್ದ ಇಂತಹ ಮಡಿಕೆಗಳು ಈಗ ಮೂಲೆ ಸೇರಿವೆ. ಗ್ರಾಮಾಂತರ ಪ್ರದೇಶದ ಕೆಲ ಮಂದಿಯ ಮನೆಗಳಲ್ಲಷ್ಟೇ ಕಾಣಬಹುದು. ಇಂತಹ ಮಡಿಕೆಗಳನ್ನು ಕಡೇ ಪಕ್ಷ ಮುಂದಿನ ಪೀಳಿಗೆಗೆ ತಿಳಿಸುವ ಜವಾಬ್ದಾರಿಯೂ ನಮ್ಮ ಮೇಲಿದೆ. ಬಹುಶಃ ಇದೇ ಕಾರಣಕ್ಕೆ ಸ್ನೇಹಿತನ ಮನೆಯಲ್ಲಿ ಈ ಮಡಿಕೆಗಳನ್ನು ಸಂಗ್ರಹಿಸಿಟ್ಟರಬಹುದು.

—ನರಸಿಂಹಾರೆಡ್ಡಿ ಯಂಕಾಮೋಳ, ಸೇಡಂ



**ನೀವೂ ಬರೆಯಿರಿ**

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ. **ವಿಳಾಸ:** editorsu@sudha.co.in